# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯಃ ಬೇಲೂರು

**ಃಸಿ. ಸಿ. ಸಂಖ್ಯೆ ಃ 5 ಃ 2018**

ಫಿರ್ಯಾದುದಾರರು ಃ ಎಂ/ಎಸ್. ಶ್ರೀ ಮಧು ಟ್ರೇಡರ್ಸ್, ಜನರಲ್ ಮರ್ಚೆಂಟ್ಸ್, ಗೆಂಡೇಹಳ್ಳಿ ರಸ್ತೆ, ಬೇಲೂರು ಟೌನ್ 573 115, ಹಾಸನ ಜಿಲ್ಲೆ, ಕರ್ನಾಟಕ ರಾಜ್ಯ, ಪ್ರತಿನಿಧಿಸುವವರುಃ ಪ್ರೊಪ್ರೈಟರ್, ಬಿ.ಬಿ. ಕುಮಾರ್ ಬಿನ್ ಬಿ.ಎಲ್. ಬಾಲಕೃಷ್ಣ, ಸುಮಾರು 49 ವರ್ಷ.

ವಿರುದ್ಧ

ಆರೋಪಿ ಃ ಎಂ/ಎಸ್. ಶ್ರೀ ಸಾಯಿ ಎಂಟರ್‌ಪ್ರೈಸಸ್, ಪ್ರೋಃ ಸಲಿಮ್ ಮುಲಾನಿ, ಎಟ್ ಪೋಸ್ಟ್, ಜಕ್ಕತ್ನಕ್ ಬ್ಯಾಕ್ ಸ್ಟ್ರೀಟ್, ಚುರ್ಮುರಬಟ್ಟಿ, ಕುಪ್ಪವದ, ಸಾಂಗ್ಲಿ 416 410, ಮಹಾರಾಷ್ಟ್ರ ರಾಜ್ಯ.

\- - - -

## ಃ ಆರೋಪಣೆಯ ಸಾರಾಂಶ ಃ

ದಿನಾಂಕ 10-12-2016 ರಂದು ಆರೋಪಿಯಾದ ನೀನು, ಪಿರ್ಯಾದುದಾರರಿಂದ ಕೊಂಡುಕೊಂಡ 106 ಪೆಡ್ಡಿ ಇತ್ಯಾದಿಗಳ ಒಟ್ಟು ಹಣದ ಬಿಲ್ ನಂ.438 ನಲ್ಲಿ ನಮೂದಾಗಿರುವ ರೂ.2,56,250-00 ಹಣದಲ್ಲಿ ರೂ.56,250-00 ಗಳನ್ನು ಪಾವತಿ ಮಾಡಿ ಬಾಕಿ ಉಳಿದ ಹಣದ ಪಾವತಿಗಾಗಿ 2,00,000-00 ರೂ.ಗಳ ಸಾಂಗ್ಲಿಯಲ್ಲಿನ ಸಾವಲಿ ಶಾಖೆಯ ಕಾರ್ಪೋರೇಶನ್ ಬ್ಯಾಂಕ್ ಚೆಕ್ ನಂಃ 082761 ರ ಚೆಕ್‌ನ್ನು ದಿನಾಂಕಃ 17-01-2017 ಕ್ಕೆ ನಮೂದಿಸಿ ಕೊಟ್ಟಿದ್ದು, ಸದರಿ ಚೆಕ್‌ನ್ನು ಪಿರ್ಯಾದುದಾರನು ತನ್ನ ಬ್ಯಾಂಕ್ ಆದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಬೇಲೂರು ಶಾಖೆಯ ಮೂಲಕ ನಗದೀಕರಣಕ್ಕೆ ಹಾಜರುಪಡಿಸಿದ್ದು, ನಿನ್ನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲದೆ ಸದರಿ ಚೆಕ್ ನಗಧೀಕರಣವಾಗದೆ ವಾಪಸ್ಸು ಬಂದಿದೆ ಎಂದು ದಿಃ 27-02-2017 ರಂದು ಬೇಲೂರು ಶಾಖೆಯ ಕಾರ್ಪೋರೇಶನ್ ಬ್ಯಾಂಕ್ ಇವರು ನೀಡಿದ್ದ ಹಿಂಬರಹದ ಮೇಲೆ ನಿನಗೆ ದಿನಾಂಕ: 22-03-2017 ರಂದು ಚೆಕ್ ನಗದೀಕರಣಗೊಳ್ಳದ ಸಂಗತಿಯನ್ನು ನೊಂದಾಯಿತ ಅಂಚೆಯ ನೋಟೀಸಿನ ಮೂಲಕ ತಿಳಿಸಿದ್ದು, ಆರೋಪಿಯಾದ ನೀನು ಸದರಿ ನೋಟಿಸ್ ಜಾರಿಯಾದರೂ ಸಹ ಯಾವುದೇ ಹಣವಾಗಲೀ, ಮರು

ಉತ್ತರವಾಗಿಲೀ ನೀಡಿರುವುದಿಲ್ಲ. ನಿನ್ನ ಖಾತೆಯಿಂದ ಚೆಕ್ ನಗಧೀಕರಣ ಮಾಡಬಾರದೆಂದು ತಿಳಿಸಿದ್ದರಿಂದ ಚೆಕ್ ನಗಧೀಕರಣವಾಗದೆ ವಾಪಸ್ಸು ಬಂದಿದಕ್ಕೆ ನೀವು ಚೆಕನ್ನು ನೀಡಿ ವರ್ಗಾವಣೆಗೊಳ್ಳಬಲ್ಲ ದಸ್ತಾವೇಜಗಳ ಅಧಿನಿಯಮ ಪ್ರಕರಣ 138 ಸಹವಾಚಕ 142 ರಂತೆ ಅಪರಾಧವನ್ನು ಎಸಗಿರುತ್ತೀಯಾ ಅಂತ ಪಿರ್ಯಾದಿ ಆರೋಪಿಸಿರುತ್ತಾನೆ.

*ಪ್ರಶ್ನೆ : ಈಗ ನಿನಗೆ ಓದಿ ಹೇಳಿ ವಿವರಿಸಿದ ಆರೋಪದ ಅಂಶಗಳು ಅರ್ಥವಾಯಿತೇ?*

*ಉತ್ತರ :*

*ಪ್ರಶ್ನೆ : ನೀನು ಆರೋಪವನ್ನು ಒಪ್ಪುವೆಯೋ ಅಥವಾ ವಿಚಾರಣೆಯಾಗಬೇಕೋ?*
*ಉತ್ತರ:*

(ಆಪಾದಿತನಿಗೆ ಆರೋಪದ ಅಂಶವನ್ನು ಓದಿ ಹೇಳಿ ವಿವರಿಸಿದ ಮೇಲೆ ಆತನು ಮೇಲ್ಕಂಡಂತೆ ನೀಡಿದ ಉತ್ತರವನ್ನು ಸ್ವಹಸ್ತಾಕ್ಷರದಿಂದ ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಗಿದೆ ಎಂದು ದೃಡೀಕರಿಸಲಾಗಿದೆ.)

ಸ್ಥಳ : ಬೇಲೂರು
ದಿನಾಂಕ : 24-02-2020

**(ಶಶಿಧರ ಎಂ. ಗೌಡ)**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಬೇಲೂರು